ರಾಜ್ಯದಲ್ಲಿ ಗ್ರಾಹಕರಿಂದ ವಿದ್ಯುಚ್ಛಕ್ತಿಯ ಬಳಕೆಯ ಪ್ರಮಾಣ

೧೨೪೨ ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ .—

ಕೈಗಾರಿಕೆ, ನೀರಾವರಿ, ಪಂಪುಸೆಟ್, ಸರ್ವ ವಿದ್ಯುತ್ ಗೃಹ ಮತ್ತು ಇತರೆ ವರ್ಗದ ಗ್ರಾಹಕರು ಬಳಕೆ ಮಾಡುತ್ತಿರುವ ವಿದ್ಯುಚ್ಛಕ್ತಿ ಪ್ರಮಾಣವೆಷ್ಟು ? (ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ರಾಜ್ಯದಲ್ಲಿ ೧೯೮೯-೯೦ನೇ ಸಾಲಿನಲ್ಲಿ ಎಲ್ಲಾ ತರಹದ ಗ್ರಾಹಕರು ಬಳಕೆ ಮಾಡಿದ ವಿದ್ಯುಚ್ಛಕ್ತಿ ಪ್ರಮಾಣ (ಪುನಃ ವಿಮರ್ಶಿತ ಅಂದಾಜಿನಂತೆ) ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಸ್ಥಾವರಗಳ ವರ್ಗ	ವಿದ್ಯುತ್ ಬಳಕೆ (ದಶ ಲಕ್ಷ ಯೂನಿಟ್‌ಗಳಲ್ಲಿ)
೧)	ಮನೆ ಸ್ಥಾವರಗಳು	೭೦೨
೨)	ಭಾಗ್ಯಜ್ಯೋತಿ	೪೫
೩)	ಸರ್ವವಿದ್ಯುತ್	೯೦೬
೪)	ವಾಣಿಜ್ಯ ದೀಪಗಳು	೨೧೭
೫)	ನೀರಾವರಿ ಪಂಪ್‌ಸೆಟ್ಟುಗಳು	೩೦೫೧
೬)	ನೀರು ಪೂರೈಕೆ ಸ್ಥಾವರಗಳು	೯೬
೭)	ಎಲ್. ಟಿ. ಪವರ್ ಮತ್ತು ಕೈಗಾರಿಕೆಗಳು	೬೬೩
೮)	ಬೀದಿ ದೀಪಗಳು	೧೪೬
೯)	ಹೆಚ್. ಟಿ. ಕೈಗಾರಿಕೆಗಳು	೪೮೨೨
	ಒಟ್ಟು	೧೦,೬೫೮

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪ್ರಸಾರಣ ಮಾರ್ಗದಲ್ಲಿ ಆಗುವ ನಷ್ಟ ಕಡಿಮೆ

೧೨೪೧ ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪ್ರಸಾರಣ ಮಾರ್ಗದಲ್ಲಿ ಆಗುವ ನಷ್ಟದ ಪ್ರಮಾಣ ವೇನು ?

ಆ) ಈ ನಷ್ಟವನ್ನು ಕಮ್ಮಿ ಮಾಡಲು ತೆಗೆದುಕೊಂಡ ಕ್ರಮವೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪ್ರಸಾರಣ ಮತ್ತು ವಿತರಣಾ ಮಾರ್ಗದಲ್ಲಿ ಈಗ ಮೂರು ವರ್ಷಗಳಿಂದ ಆದ ನಷ್ಟದ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಪ್ರಸಾರಣ ಮಾರ್ಗ ಹಾಗೂ ವಿತರಣಾ ಮಾರ್ಗದ ನಷ್ಟ ಶೇಕಡಾವಾರು
೧೯೮೭-೮೮	೧೩೪೪
೧೯೮೮-೮೯	೨೦.೭೯
೧೯೮೯-೯೦	೨೦.೦೦ (ತಾತ್ಕಾಲಿಕ)